**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 1 ರಿಂದ 9 ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿನಾಯತಿ ನೀಡುವ ಬಗ್ಗೆ.

**ಓದಲಾಗಿದೆ:**
1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರ ಪತ್ರ ಸಂಖ್ಯೆ: ಸಶಿಕ/ಸಸಿ/03/ಪ.ವಿ.ಕು/2022-23/JDP/E-11676, ದಿನಾಂಕ: 23/02/2023.
2. ಸರ್ಕಾರದ ಆದೇಶ ಸಂಖ್ಯೆ: ಇಪಿ 62 ಎಸ್.ಎಲ್.ಬಿ 2021, ದಿನಾಂಕ: 15/03/2021.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ RPwD ಕಾಯ್ದೆ, 2016 ರಲ್ಲಿ 21 ವಿವಿಧ್ವ ರೀತಿಯ ನ್ಯೂನ್ಯತೆಗಳನ್ನು ಗುರುತಿಸಲಾಗಿದ್ದು, ವಿಕಲಚೇತನರ ಹಕ್ಕುಗಳ ಕಾಯ್ದೆ 2016ರ ಕೇಂದ್ರದ ರಾಜ್ಯ ಪತ್ರದ ಪ್ರಕಟಣೆ ದಿನಾಂಕ: 28/12/2016 ರಲ್ಲಿರುವಂತೆ ಕಾನೂನು ಹಾಗೂ ನ್ಯಾಯ ಸಚಿವಾಲಯದಿಂದ ಪಕಟಿಸಿರುವ The gazette of India extraordinary ಯಲ್ಲಿ ವಿಶೇಷ ಅಗತ್ಯವುಳ್ಳವರ ನಿರ್ದಿಷ್ಟ ಅಂಗವೈಕಲ್ಯಗಳ ಕುರಿತು ವಿವರಿಸಿರುತ್ತಾರೆ. ಈ ಪ್ರಕಾರ 21 ವಿವಿಧ ನ್ಯೂನ್ಯತೆಗಳಡಿಯಲ್ಲಿ ಗುರುತಿಸಲ್ಪಟ್ಟಿರುವ 94254 ವಿದ್ಯಾರ್ಥಿಗಳು ರಾಜ್ಯದಲ್ಲಿ 2022-23 ನೇ ಸಾಲಿನಲ್ಲಿ ಶಾಲೆಗಳಲ್ಲಿ ದಾಖಲಾಗಿದ್ದಾರೆ.

NEP 2020 ರ Chapter 6.1 ರಲ್ಲಿ ಸಮನ್ವಯ ಶಿಕ್ಷಣ ಕುರಿತ ಉದೃತ ಭಾಗ ಕೆಳಕಂಡಂತಿದೆ.

> "Education is the single greatest tool for achieving social justice and equality. Inclusive and equitable education - while indeed an essential goal in its own right - The education system must aim to benefit India's children so that no child loses any opportunity to learn and excel because of circumstances of birth or background. This Policy reaffirms that bridging the social category gaps in access, participation, and learning outcomes in school education will continue to be one of the major goals of all education sector development programmes".

ಸಮನ್ವಯ ಶಿಕ್ಷಣ ಅಥವಾ ಒಳಗೊಳ್ಳುವ ಶಿಕ್ಷಣವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಬೇಕಾದಲ್ಲಿ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ತಡೆಮುಕ್ತ ವಾತಾವರಣಗಳ ಅಗತ್ಯತೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ, ತಡೆಮುಕ್ತ ವಾತಾವರಣವೆಂದರೆ ಭೌತಿಕ ಅಡತಡೆಗಳನ್ನು ನಿವಾರಿಸುವುದು. ಅಲ್ಲದೆ, ಆ ವಿದ್ಯಾರ್ಥಿಯ ಕಲಿಕ ಗ್ರಹಿಕೆ/ಪರೀಕ್ಷೆ ಎದುರಿಸುವಲ್ಲಿನ ಅಡೆ-ತಡೆಗಳಲ್ಲಿಯೂ ಮುಕ್ತ ವಾತಾವರಣ ನಿರ್ಮಿಸಬೇಕಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 62 ಎಸ್.ಎಲ್.ಬಿ 2021, ದಿನಾಂಕ: 15/03/2021ರಲ್ಲಿನ ಆದೇಶದಂತೆ, ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ 10ನೇ ತರಗತಿ ಪರೀಕ್ಷಾ ಮಂಡಳಿಯ ಪರೀಕ್ಷೆಯಲ್ಲಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಟಿಪಿಯು 2018, ದಿನಾಂಕ 28/02/2018ರಲ್ಲಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಹಲವಾರು ವಿನಾಯತಿಗಳನ್ನು ನೀಡಲಾಗಿದೆ. ಆದರೆ, ಸದರಿ ಸೌಲಭ್ಯಗಳು ಬೋರ್ಡ್ ಪರೀಕ್ಷೆಗಳಿಗೆ ಮಾತ್ರ ಸೀಮಿತವಾಗಿದ್ದು 1 ರಿಂದ 9 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ಒದಗಿಸಿರುವುದಿಲ್ಲ.

ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿನಾಯತಿ, ಪರೀಕ್ಷೆಯಲ್ಲಿ ಸುಧಾರಣೆಗಳು, ರಿಯಾಯತಿ/ವಿನಾಯತಿ ಸೌಲಭ್ಯಗಳನ್ನು ಒದಗಿಸುವ ಕುರಿತು ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 13/07/2022ರಂದು ನಡೆದ ಸಭೆಯ ನಡವಳಿ ಕ್ರ.ಸಂ-2 ರಲ್ಲಿ 10 ಮತ್ತು 12 ನೇ ತರಗತಿಗೆ ನೀಡಿರುವಂತೆ 1 ರಿಂದ 9 ನೇ ತರಗತಿ ವಿದ್ಯಾರ್ಥಿಗಳಿಗೂ ರಿಯಾಯತಿ/ವಿನಾಯತಿ ಸೌಲಭ್ಯಗಳನ್ನು ಒದಗಿಸಲು ನಿರ್ಣಯವಾಗಿರುತ್ತದೆ.

ಈ ಹಿನ್ನಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಒದಗಿಸಬೇಕಿರುವ ಪರೀಕ್ಷಾ ಸಂಬಂಧಿತ ಸೌಲಭ್ಯಗಳ ಪಟ್ಟಿಯನ್ನು ಹಾಗೂ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಪಡೆಯಲು ಅಗತ್ಯವಿರುವ ಪ್ರಮಾಣ ಪತ್ರ ಪಡೆಯಲು ವಿವರಗಳನ್ನು ಒದಗಿಸಲಾಗಿದ್ದು, 1 ರಿಂದ 9ನೇ ತರಗತಿವರೆಗಿನ ರಾಜ್ಯಪಠ್ಯ ಕ್ರಮದ ವಿದ್ಯಾರ್ಥಿಗಳಿಗೆ ಪರೀಕ್ಷಾ ವಿನಾಯತಿ ನೀಡುವ ಬಗ್ಗೆ ಆದೇಶ ಹೊರಡಿಸಲು ಕೋರಿರುತ್ತಾರೆ.

ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರ ಪ್ರಸ್ತಾವನೆಗೆ ಸಂಬಂಧಿಸಿದಂತೆ, 1 ರಿಂದ 9 ನೇ ತರಗತಿವರೆಗಿನ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ರಿಯಾಯತಿ/ವಿನಾಯತಿ ಸೌಲಭ್ಯಗಳನ್ನು ಒದಗಿಸಲು ಸರ್ಕಾರವು ತೀರ್ಮಾನಿಸಲಾಗಿದ್ದು, ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಇಪಿ 122 ಪಿಜಿಸಿ 2023,</u>**
**<u>ಬೆಂಗಳೂರು, ದಿನಾಂಕ: 07/10/2023</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 1 ರಿಂದ 9 ನೇ ತರಗತಿಗಳಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಅನುಬಂಧ-1 ಮತ್ತು ಅನುಬಂಧ-2 ರಲ್ಲಿರುವಂತೆ ರಾಜ್ಯ ಪಠ್ಯಕ್ರಮದಿಂದ ನೀಡಬೇಕಾದ ಪರೀಕ್ಷಾ ವಿನಾಯತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Hosamath 7/10/2023

**(ಮಹಾಂತಯ್ಯ ಎಸ್ ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

07/10

**ಇವರಿಗೆ,**

1. ಪ್ರಧಾನ ಮಹಾ ಲೇಖಪಾಲರು-ಕರ್ನಾಟಕ(ಎ ಮತ್ತು ಇ), ಬೆಂಗಳೂರು.
2. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
5. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ.(ಆಯಾ ಆಯುಕ್ತಾಲಯದ ಮುಖಾಂತರ)
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ(ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ)
7. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: ಇಪಿ 122 ಪಿಜಿಸಿ 2023, ದಿನಾಂಕ: 07/10/2023ಕ್ಕೆ**

**ಅನುಬಂಧ-1**

1 ರಿಂದ 9 ನೇ ತರಗತಿವರೆಗಿನ ವಿಶೇಷ ಅಗತ್ಯವುಳ್ಳ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ನೀಡಬೇಕಾದ ಪರೀಕ್ಷಾ ವಿನಾಯತಿಗಳ ಪಟ್ಟಿ.

**List of Examination Accommodation for students of class 1 to 9.**

| ಕ್ರ.ಸಂ | ಒದಗಿಸಬೇಕಾದ ಸೌಲಭ್ಯ | ವಿವರ & ಕ್ರಮಗಳು |
|---|---|---|
| 1. | ಬರಹಗಾರರ ಅಥವಾ ಒದುಗಾರರ ಸೌಲಭ್ಯ ಮತ್ತು ಹೆಚ್ಚುವರಿ ಸಮಯ<br>Facility of scribe or reader and compensatory time | ಅಂಧತ್ವ, ಮಿತದೃಷ್ಟಿ, ಬರೆಯಲು ದೈಹಿಕ ತೊಂದರೆ ಹೊಂದಿರುವ, ಲೋಕೋಮೋಟರ್ ನ್ಯೂನ್ಯತೆ, ನರದೌರ್ಭಲ್ಯ ಹೊಂದಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ನೀಡಬಹುದಾಗಿದೆ.<br>• ಪರೀಕ್ಷಾ ಕೇಂದ್ರ ಮುಖ್ಯಸ್ಥರು/ ಶಾಲಾ ಹಂತದ ಪರೀಕ್ಷೆಯಾದರೆ, ಶಾಲಾ ಮುಖ್ಯಸ್ಥರಿಗೆ ಮುಂಚಿತವಾಗಿಯೇ ಮಾಹಿತಿ ನೀಡಿ, ಸಹಾಯಕರ ಆಯ್ಕೆ ಅಭ್ಯರ್ಥಿಯ ಹಂತದಲ್ಲಿಯೇ ಮಾಡಿಕೊಳ್ಳಬಹುದು. ಅಥವಾ ಶಾಲಾ ಮುಖ್ಯಸ್ಥರು, ತಾವೇ ಆಯ್ಕೆ ಮಾಡಿ ನೀಡಬಹುದು, ಎರಡೂ ಕ್ರಮಗಳಲ್ಲಿ ಬರಹಗಾರ/ಒದುಗಾರರ ತರಗತಿ ಅಭ್ಯರ್ಥಿಯ ತರಗತಿಗಿಂತ ಒಂದು ತರಗತಿ ಕಡಿಮೆ ಇರಬೇಕು.<br>• ಬರಹಗಾರ/ಒದುಗಾರರ ಸಂಪೂರ್ಣ ಮಾಹಿತಿಯನ್ನು ನಮೂನೆಯಲ್ಲಿರುವಂತೆ ನೀಡಿರಬೇಕು.<br>• ತುರ್ತು ಸಂದರ್ಭದಲ್ಲಿ ಮಾತ್ರ ಬರಹಗಾರ/ ಒದುಗಾರರನ್ನು ಬದಲಿಸಿಕೊಳ್ಳಲು ಅವಕಾಶವಿದೆ. ಒಂದು ವಿಷಯಕ್ಕೆ ಒಬ್ಬರೇ ಬರಹಗಾರರಿರಬೇಕು.<br>• ಇವರಿಗೆ ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಒದಗಿಸಿ, ಪ್ರತ್ಯೇಕ ಮೇಲ್ವಿಚಾರಕರನ್ನು ನೇಮಿಸಬೇಕು.<br>• ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿಯೇ ಒದಗಿಸುವುದು.<br>• ಪಬ್ಲಿಕ್ ಪರೀಕ್ಷೆ ಮಾದರಿಯಲ್ಲಿ ಪರೀಕ್ಷೆ ನಡೆಸಿದ್ದಲ್ಲಿ, ಉತ್ತರ ಪತ್ರಿಕೆ ಮುಖಪುಟದಲ್ಲಿ ಹಸಿರು ಸ್ಟಿಕರ್ ಅಂಟಿಸಲು ಅವಕಾಶ ನೀಡುವುದು.<br>**<u>ಹೆಚ್ಚುವರಿ ಸಮಯ:</u>**<br>ಬರಹಗಾರ/ಒದುಗಾರರ ಸೌಲಭ್ಯದೊಂದಿಗೆ ಹೆಚ್ಚುವರಿ ಸಮಯವನ್ನು ತೆಗೆದುಕೊಳ್ಳಲು ಅವಕಾಶವಿದೆ.<br>-3 ಗಂಟೆಯ ಪ್ರಶ್ನೆ ಪತ್ರಿಕೆಗೆ ಹೆಚ್ಚುವರಿ 60 ನಿಮಿಷ<br>-2.30 ಗಂಟೆಗೆ - 50 ನಿಮಿಷ<br>-2 ಗಂಟೆಗೆ -40 ನಿಮಿಷ<br>-1 ಗಂಟೆ 30 ನಿಮಿಷಕ್ಕೆ 30 ನಿಮಿಷ ಹೆಚ್ಚುವರಿ |

| | | |
|---|---|---|
| 2. | ಭಾಷಾ ವಿನಾಯಿತಿ Exemption from Language | ಶ್ರವಣ ಅಂಧತ್ವ- Deaf blind, Muscular dystrophy, ಕಲಿಕಾ ನ್ಯೂನ್ಯತೆ-Learning disability, ದೃಷ್ಟಿ ಮಾಂದ್ಯ - Blind, ಮಿತದೃಷ್ಟಿದೋಷ -Low vision, - ಬುದ್ಧಿಮಾಂದ್ಯತೆ-Intellectual disability ಹೊಂದಿರುವ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇರೆಗೆ ಶಿಕ್ಷಣದ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು, ಉಳಿದ 2 ಭಾಷೆಗಳಿಗೆ ವಿನಾಯ್ತಿ ಇದೆ. |
| 3. | ಪರ್ಯಾಯ ಪ್ರಶ್ನೆಗಳು/ ಪ್ರತ್ಯೇಕ ಪ್ರಶ್ನೆಗಳು Alternate questions/ separate questions. | ದೃಷ್ಟಿ ಮಾಂದ್ಯ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಕಾರದ ಪ್ರಶ್ನೆಗಳನ್ನು ಒದಗಿಸುವುದು:<br><br>ಉದಾ: ಭೂಪಟ ರಚನೆ ಬದಲಿಗೆ ಬೇರೆ ಪ್ರಶ್ನೆ ನೀಡುವುದು |
| 4. | ಡಿಸ್ ಲೆಕ್ಸಿಯಾ ಮಕ್ಕಳಿಗೆ ವಿನಾಯಿತಿಗಳು | • ಪರೀಕ್ಷಾ ಸಮಯದಲ್ಲಿ Simple Calculator ತಂದಿದ್ದಲ್ಲಿ ಬಳಸಲು ಅನುಮತಿ ನೀಡುವುದು.<br>• ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಒದಗಿಸುವುದು.<br>• ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ಉಚ್ಛರಣಾ ದೋಷಗಳನ್ನು ಮೌಲ್ಯಮಾಪಕರು ಪರಿಗಣಿಸುವಂತಿಲ್ಲ. ಈ ಕುರಿತು ಮೌಲ್ಯಮಾಪಕರಿಗೆ ಸೂಚನೆ ನೀಡುವುದು. |
| 5. | ವಿಷಯಗಳ ಆಯ್ಕೆಯಲ್ಲಿ ಸಡಿಲತೆ-Flexibility in choosing subjects. | - ಕಲಿಕಾ ನ್ಯೂನ್ಯತೆ-Learning disability, ದೃಷ್ಟಿ ಮಾಂದ್ಯ Blind, ಮಿತದೃಷ್ಟಿದೋಷ -Low vision, ಬುದ್ಧಿಮಾಂದ್ಯತೆ-Intellectual disability ಹೊಂದಿರುವ ವಿದ್ಯಾರ್ಥಿಗಳಿಗೆ ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲಿಗೆ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿ ಸಂಗೀತ ವಿಷಯಗಳಲ್ಲಿ ಯಾವುದಾದರೂ 2 ವಿಷಯಗಳನ್ನು ಸಮಾಜ ವಿಜ್ಞಾನದ ಜೊತೆಗೆ ಆಯ್ಕೆ ಮಾಡಿಕೊಳ್ಳಬಹುದು, ಹೆಚ್ಚುವರಿ ಸಮಯದ ಸೌಲಭ್ಯವೂ ಇದೆ.<br>- ಈ ಸೌಲಭ್ಯ 8 ಮತ್ತು 9 ನೇ ತರಗತಿ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಿದೆ. |

7/10/2022

(ಮಹಾಂತಯ್ಯ ಎಸ್ ಹೊಸಮಠ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

**ಸರ್ಕಾರದ ಆದೇಶ ಸಂಖ್ಯೆ: ಇಪಿ 122 ಪಿಜಿಸಿ 2023, ದಿನಾಂಕ: 07/10/2023ಕ್ಕೆ**
**ಅನುಬಂಧ-2**

## ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರ-
## Medical Certificate Issuing Authority:

ಈ ಕೆಳಕಂಡ ಸಂಸ್ಥೆಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ವಿಭಿನ್ನ ಸಾಮರ್ಥ್ಯವುಳ್ಳವಿದ್ಯಾರ್ಥಿಗಳಿಗೆ ವಿನಾಯತಿ ನೀಡಲು ಪರಿಗಣಿಸಬಹುದಾಗಿದೆ.

1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿ/ ಸಿವಿಲ್ ಸರ್ಜನ್/ ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ (ನಮೂನೆಯಲ್ಲಿರುವಂತೆ).
2. ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ Spastic Society of India.
3. Rehabilitation Council of India/ ಕೇಂದ್ರ ಸರ್ಕಾರ/ ಆಯಾ ರಾಜ್ಯ ಸರ್ಕಾರದಿಂದ ನೊಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು/ ವೃತ್ತಿನಿರತರು ನೀಡುವ ಪ್ರಮಾಣ ಪತ್ರ.

**ಕಲಿಕಾ ನ್ಯೂನ್ಯತೆಗೆ ಈ ಕೆಳಕಂಡ ಸಂಸ್ಥೆಯ ದೃಢೀಕರಣದ ಅಗತ್ಯವಿದೆ.**

1. National Institute of Mental Health and Neurosciences- NIMHANS.
2. ಅಖಿಲ ಭಾರತ ದೃಕ್ ಶ್ರವಣ ಸಂಸ್ಥೆ, ಮೈಸೂರು- AIISH.
3. ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಯಾವುದೇ ಮನಃಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರ.
4. ಕನಿಷ್ಠ ಎಂ.ಫಿಲ್ ವಿದ್ಯಾರ್ಹತೆಯನ್ನು ಹೊಂದಿರುವ ಕ್ಲಿನಿಕಲ್ ಮನಶಾಸ್ತ್ರಜ್ಞರು ನೀಡುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇರದ ಸರ್ಕಾರಿ ವೈದ್ಯರು ದೃಢೀಕರಿಸಿದ ಪ್ರಮಾಣ ಪತ್ರ.
5. ಮಲ್ಲೇಶ್ವರಂ Dyslexia Association (R), ನಂ 103, ಶಾನರ್ಾಗ್ ಅಪಾರ್ಟಮೆಂಟ್ ಬೆಂಗಳೂರು-55 ರವರುನೀಡುವ ಪ್ರಮಾಣ ಪತ್ರ.

7/10/23

**(ಮಹಾಂತಯ್ಯ ಎಸ್ ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

**ಸರ್ಕಾರದ ಆದೇಶ ಸಂಖ್ಯೆ: ಇಪಿ 122 ಪಿಜಿಸಿ 2023, ದಿನಾಂಕ: 07/10/2023ಕ್ಕೆ**

**ನಮೂನೆ-1**

**ಪರೀಕ್ಷೆಗೆ ಓದುಗಾರ/ ಬರಹಗಾರರನ್ನು ಪಡೆಯಲು ಬಳಸಬಹುದಾದ ನಮೂನೆ**

ನಾನು ________________________ ಶಾಲೆಯ ವಿದ್ಯಾರ್ಥಿಯಾಗಿದ್ದು, ________ ಇವರ ಮಗ / ಮಗಳಾಗಿದ್ದು, ________________ ನೋಂದಣಿ ಸಂಖ್ಯೆಯಾಗಿದ್ದು, ________________ ಪರೀಕ್ಷಾ ಕೇಂದ್ರವಾಗಿರುತ್ತದೆ.

ನಾನು ಈ ಮೂಲಕ ಪ್ರಮಾಣೀಕರಿಸುವುದೇನಂದರೆ, ________________ ಇವರು ಸದರಿ ಪರೀಕ್ಷೆಗೆ ಬರಹಗಾರರ/ಓದುಗಾರರ ಸೇವೆ ಒದಗಿಸಲಿದ್ದಾರೆ.

ನಾನು ಈ ಮೂಲಕ ಪ್ರಮಾಣೀಕರಿಸುವುದೇನಂದರೆ, ಅವನ/ಅವಳ ವಿದ್ಯಾರ್ಹತೆಯು ____________ ಆಗಿದ್ದು ಒಂದು ವೇಳೆ ಅವನ/ಅವಳ ವಿದ್ಯಾರ್ಹತೆಯು ನಮೂದಿಸಿದ್ದಕ್ಕಿಂತ ಹೆಚ್ಚಿನದೆಂದು ಕಂಡುಬಂದಲ್ಲಿ ನಾನು ಪರೀಕ್ಷೆಗೆ ಸಂಬಂಧಿಸಿದ ಸೇವೆಗಳನ್ನು ಹಿಂಪಡೆಯುತ್ತೇನೆ.

ವಿಶೇಷ ಚೇತನ ವಿದ್ಯಾರ್ಥಿಯ ಪೋಷಕರ ಸಹಿ          ವಿಶೇಷ ಚೇತನ ವಿದ್ಯಾರ್ಥಿಯ ಸಹಿ

ಸ್ಥಳ:

ದಿನಾಂಕ:

Hosamath 7/10/2023

**(ಮಹಾಂತಯ್ಯ ಎಸ್ ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)

**<u>ಸರ್ಕಾರದ ಆದೇಶ ಸಂಖ್ಯೆ: ಇಪಿ 122 ಪಿಜಿಸಿ 2023, ದಿನಾಂಕ: 07/10/2023ಕ್ಕೆ</u>**

**<u>ನಮೂನೆ - 2</u>**

**<u>ಪರೀಕ್ಷಾರ್ಥಿಯ ದೈಹಿಕ ಸಾಮರ್ಥ್ಯವನ್ನು ದೃಢೀಕರಿಸುವ ಪ್ರಮಾಣ ಪತ್ರ</u>**

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನಾನು,______________ಇವರ ಮಗ/ ಮಗಳು ಆಗಿರುವ ಕುಮಾರಿ / ಕುಮಾರ / ಶ್ರೀ / ಶ್ರೀಮತಿ ______________________(ದೈಹಿಕ ನ್ಯೂನತೆಯುಳ್ಳ ವಿದ್ಯಾರ್ಥಿ, ಹೆಸರು) ಈ ವ್ಯಕ್ತಿಯನ್ನು ಪರೀಕ್ಷಿಸಿದ್ದು ಇವರು ____________ ನ್ಯೂನತೆಯ ವಿಧ, ನ್ಯೂನತೆಯ ಶೇಕಡಾ ___________ ಇದ್ದು ವೈದ್ಯಕೀಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ ಹೊಂದಿದ್ದು___________________________ಶಾಲೆಯ ವಿದ್ಯಾರ್ಥಿಯಾಗಿದ್ದು, ಈ ಮೂಲಕ ದೃಢೀಕರಿಸುವುದೇನಂದರೆ ಇವನ/ಇವಳ ದೈಹಿಕ ನ್ಯೂನತೆಯು ಅವನ/ಅವಳ ಬರವಣಿಗೆಯ ಮೇಲೆ ತೊಂದರೆ ಉಂಟು ಮಾಡುತ್ತದೆ.

ಸಹಿ/-

ಮುಖ್ಯ ವೈದ್ಯಾಧಿಕಾರಿ/ಸಿವಿಲ್
ಸರ್ಜನ್ / ಸರ್ಕಾರಿ ಆಸ್ಪತ್ರೆಯ
ವೈದ್ಯಕೀಯ ಅಧೀಕ್ಷಕರು

ಹೆಸರು ಮತ್ತು ಪದನಾಮ ಸರ್ಕಾರಿ
ಆಸ್ಪತ್ರೆ ಆರೋಗ್ಯ ಘಟಕ ಸಲಹಾ
ಕೇಂದ್ರದ ಹೆಸರು ಮತ್ತು ಮೊಹರು.

ಸ್ಥಳ:
ದಿನಾಂಕ:

**ಸೂಚನೆ:** ನ್ಯೂನತೆಗನುಗುಣವಾಗಿ ನುರಿತ ತಜ್ಞರು ನೀಡುವ ವೈದ್ಯಕೀಯ ಪ್ರಮಾಣ ಪತ್ರ, (ಉದಾ: ದೃಷ್ಟಿ ಮಾಂದ್ಯತೆ-ನೇತ್ರತಜ್ಞರು, ಲೋಕೋಮೋಟಿವ್ ನ್ಯೂನತೆ-ಮೂಳೆ ತಜ್ಞರು/ಪಿಎಂಆರ್)

7/10/2023

**(ಮಹಾಂತಯ್ಯ ಎಸ್ ಹೊಸಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
(ಪ್ರಾಥಮಿಕ)